Udayavani pg 11

# ಕಾಡುಪ್ರಾಣಿಯಿಂದ ಹಾನಿಗೊಳಗಾದ ಫಸಲಿಗೂ ಇನ್ನು ಮುಂದೆ ಬೆಳೆ ವಿಮೆ!

## ಪ್ರಧಾನ ಮಂತ್ರಿ ಫಸಲ್ ಬಿಮಾ ಯೋಜನೆ ವ್ಯಾಪ್ತಿ ವಿಸ್ತರಣೆ

**ಹೊಸದಿಲ್ಲಿ:** ಮುಂದಿನ ಖಾರಿಫ್ ಋತುವಿನಿಂದ ಅನ್ವಯವಾಗುವಂತೆ ವನ್ಯಜೀವಿಗಳ ದಾಳಿಯಿಂದ ಹಾನಿಗೀಡಾಗುವ ಕೃಷಿ ಬೆಳೆಗಳು ಮತ್ತು ವಿಪರೀತ ಮಳೆಯಿಂದ ಜಲಾವೃತಗೊಳ್ಳುವ ಗದ್ದೆಗಳಲ್ಲಿ ಬೆಳೆಯಲಾದ ಭತ್ತಕ್ಕೆ ಪ್ರಧಾನ ಮಂತ್ರಿ ಫಸಲ್ ಬಿಮಾ ಯೋಜನೆ (ಪಿಎಂಎಫ್‌ಬಿವೈ) ಯಡಿಯಲ್ಲಿ ಬೆಳೆ ನಷ್ಟ ಭರಿಸಲು ಕೇಂದ್ರ ಸರ್ಕಾರದ ಕೃಷಿ ಮತ್ತು ರೈತರ ಕಲ್ಯಾಣ ಖಾತೆ ತೀರ್ಮಾನಿಸಿದೆ. ಇದರಿಂದ ದೇಶದ ಕರಾವಳಿ, ಹಿಮಾಲಯದ ತಪ್ಪಲಲ್ಲಿರುವ ಪ್ರದೇಶಗಳು ಮತ್ತು ಈಶಾನ್ಯ ರಾಜ್ಯಗಳ ರೈತರಿಗೆ ಅನುಕೂಲವಾಗಲಿದೆ.

ಹಠಾತ್ತನೆ, ಸ್ಥಳೀಯವಾಗಿ ಮತ್ತು ಭಾರೀ ಬೆಳೆ ಹಾನಿ ಸಂದರ್ಭದಲ್ಲಿ ರೈತರಿಗೆ ನಷ್ಟಪರಿಹಾರ ಲಭಿಸುವಂತಾಗಲು ವಿಮಾ ಯೋಜನೆಯ ವ್ಯಾಪ್ತಿಯನ್ನು ವಿಸ್ತರಿಸಬೇಕೆಂಬ ಹಲವು ರಾಜ್ಯಗಳ ಮನವಿಗಳನ್ನು ಪರಿಗಣಿಸಿ ಕೇಂದ್ರ ಸರ್ಕಾರ ಈ ನಿರ್ಧಾರ ಕೈಗೊಂಡಿದೆ. ಈ ಸಂಬಂಧ ಕೃಷಿ ಇಲಾಖೆ ಪ್ರಧಾನ ಮಂತ್ರಿ ಫಸಲ್ ಬಿಮಾ ಯೋಜನೆಯ ಮಾರ್ಗಸೂಚಿ ಪರಿಷ್ಕರಿಸಿದ್ದು, ವನ್ಯಜೀವಿಗಳ ದಾಳಿಯಿಂದ ಉಂಟಾಗುವ ಬೆಳೆ ನಷ್ಟವನ್ನು ಸ್ಥಳೀಯ ಅಪಾಯ ವರ್ಗದ ಪಟ್ಟಿಯಲ್ಲಿ ಗುರುತಿಸಿದೆ. ಆಯಾಯ ರಾಜ್ಯ ಸರ್ಕಾರಗಳು ಕೃಷಿ ಬೆಳೆಗೆ ಹಾನಿ ಉಂಟು ಮಾಡುವ ವನ್ಯಜೀವಿಗಳನ್ನು ಪಟ್ಟಿಮಾಡಲಿವೆ. ಈ ಪಟ್ಟಿಯಲ್ಲಿರುವ ವನ್ಯಜೀವಿಗಳ ದಾಳಿಯಿಂದ ಹಾನಿಗೀಡಾದ ಕೃಷಿ ಬೆಳೆಗಳ ಜಿಯೋ ಟ್ಯಾಗ್ ಮಾಡಲಾದ ಛಾಯಾಚಿತ್ರಗಳನ್ನು ರೈತರು ಬೆಳೆ ವಿಮಾ ಆ್ಯಪ್ಲಿಕೇಶನ್ ಮೂಲಕ 72 ಗಂಟೆಗಳ ಒಳಗಾಗಿ ಅಪ್‌ಲೋಡ್ ಮಾಡಿ ನಷ್ಟವನ್ನು ವರದಿ ಮಾಡಬೇಕು ಎಂದು ತಿಳಿಸಿದೆ. ಮುಂದಿನ ವರ್ಷದ ಖಾರಿಫ್‌ನಿಂದ ಇದು ಜಾರಿಗೆ ಬರಲಿದೆ ಎಂದು ಇಲಾಖೆಯ ಪ್ರಕಟಣೆ ತಿಳಿಸಿದೆ.

- ವಿಪರೀತ ಮಳೆಯಿಂದ ಜಲಾವೃತಗೊಳ್ಳುವ ಗದ್ದೆಗಳಲ್ಲಿ ಬೆಳೆಯಲಾದ ಭತ್ತವೂ ಸೇರ್ಪಡೆ

Vijayavani pg 09

# ವಿ ರೈತ ಮಿತ್ರ



**ಸೂರ್ಯಕಾಂತಿಯಲ್ಲಿ ನಂಜುರೋಗ ಹೆಚ್ಚಾಗಿ ಕಂಡುಬಂದಿದ್ದು, ಪರಿಹಾರ ತಿಳಿಸಿ.**

| ಶಿವಶಂಕರ್ ಕಲುಬುರಗಿ

ಸೂರ್ಯಕಾಂತಿ ನಮ್ಮ ರಾಜ್ಯದ ಪ್ರಮುಖ ಎಣ್ಣೆಕಾಳು ಬೆಳೆ. ನೆಕ್ರೋಸಿಸ್ ನಂಜು ರೋಗಕ್ಕೆ ತುತ್ತಾದ ಗಿಡದ ಎಲೆಯ ಕೆಲ ಭಾಗವು ಸುಟ್ಟಂತೆ ಕಂಡುಬಂದು ಎಲೆಗಳು ಒಂದು ಕಡೆ ತಿರುಚಿಕೊಂಡಿರುತ್ತವೆ. ರೋಗ ತಗುಲಿದ ಸಸಿಗಳ ಎಲೆಗಳು ಹಸಿರು-ಹಳದಿ ಮಚ್ಚೆಯಿಂದ ಕೂಡಿದ್ದು, ಅಲ್ಲಲ್ಲಿ ಎಲೆಯ ಭಾಗಗಳು ಉಬ್ಬಿದಂತೆ ಕಾಣುತ್ತವೆ. ರೋಗದ ತೀವ್ರತೆ ಹೆಚ್ಚಾದ್ದಲ್ಲಿ ಹೂ ಅರಳುವುದಿಲ್ಲ ಹಾಗೂ ಕಾಳು ಕಟ್ಟುವುದಿಲ್ಲ.

**ನಿರ್ವಹಣೆ:** ಹೊಲ ಮತ್ತು ಬದುಗಳಲ್ಲಿ ಕಳೆಗಳನ್ನು ತೆಗೆದು ಸ್ವಚ್ಛ ಮಾಡುವುದು, ಬೆಳೆ ಪರಿವರ್ತನೆ ಮಾಡುವುದು, ರೋಗ ಪೀಡಿತ ಗಿಡಗಳನ್ನು ಕಿತ್ತು ನಾಶಪಡಿಸುವುದು. ಪ್ರತಿ ಕಿ.ಗ್ರಾಂ ಬಿತ್ತನೆ ಬೀಜಕ್ಕೆ ಇಮಿಡಾಕ್ಲೋಪ್ರಿಡ್ 70 ಡಬ್ಲ್ಯುಎಸ್ ಕೀಟನಾಶಕದಿಂದ ಬೀಜೋಪಚಾರ ಮಾಡುವುದು. ಅವಶ್ಯವಿದ್ದಲ್ಲಿ ಬಿತ್ತನೆಯಾದ 25 ಮತ್ತು 45 ದಿನಗಳಲ್ಲಿ ಪ್ರತಿ ಲೀಟರ್ ನೀರಿಗೆ ಇಮಿಡಾಕ್ಲೋಪ್ರಿಡ್ 200 ಎಸ್‌ಎಲ್ ಬೆರೆಸಿ ಎರಡು ಬಾರಿ ಸಿಂಪಡಿಸುವುದು ಸೂಕ್ತ.

| ಡಾ. ಕೆ.ಪಲ್ಲವಿ ಸಸ್ಯ ಸಂರಕ್ಷಣಾ ತಜ್ಞರು

ರೈತರ ಸಮಸ್ಯೆಗಳಿಗೆ ಕೃಷಿ ತಂತ್ರಜ್ಞಾನ ಮಾಹಿತಿ ಕೇಂದ್ರ, ವಿಸ್ತರಣಾ ನಿರ್ದೇಶನಾಲಯ, ಕೃಷಿ ವಿಶ್ವವಿದ್ಯಾನಿಲಯ, ಬೆಂಗಳೂರು. ಇಲ್ಲಿನ ತಜ್ಞರು ಉತ್ತರಿಸಲಿದ್ದಾರೆ. ನಿಮ್ಮ ಪ್ರಶ್ನೆಗಳನ್ನು 18004250571/ 080-23627889 ಸಂಖ್ಯೆಗೆ ಕರೆ ಮಾಡಿ ತಿಳಿಸಿ ಅಥವಾ 94824 77812 ಸಂಖ್ಯೆಗೆ ವಾಟ್ಸ್ಆ್ಯಪ್ ಮಾಡಿ

# ಪಶು ವೈದ್ಯಕೀಯ ವಿವಿಯಲ್ಲಿ ಮತ್ಸ್ಯಲೋಕ ಸೃಷ್ಟಿ

## ಮತ್ಸ್ಯಮೇಳಕ್ಕೆ ಇಂದು ಸಿಎಂ, ಡಿಸಿಎಂ ಚಾಲನೆ | 15 ಮಳಿಗೆಗಳಲ್ಲಿ ಮೀನುಗಾರಿಕೆ ಕುರಿತು ಮಾಹಿತಿ

- ರಿತೇಶ್ ಕ್ಯಾತಘಟ್ಟ

ಸಂ.ಕ.ಸಮಾಚಾರ, ಬೆಂಗಳೂರು

ರಾಜ್ಯ ಮೀನುಗಾರಿಕೆ ಇಲಾಖೆ ವತಿಯಿಂದ ನಗರದ ಹೆಬ್ಬಾಳದಲ್ಲಿನ ಪಶುವೈದ್ಯಕೀಯ ಮಹಾವಿದ್ಯಾಲಯದ ಆವರಣದಲ್ಲಿ ವಿಶ್ವ ಮೀನುಗಾರಿಕೆ ದಿನಾಚರಣೆ ಅಂಗವಾಗಿ ಏರ್ಪಡಿಸಲಾಗಿರುವ ಮತ್ಸ್ಯಮೇಳ(2025)ಕ್ಕೆ ಸಿದ್ಧತೆ ನಡೆದಿದೆ. ಶನಿವಾರ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಮತ್ಸ್ಯಮೇಳವನ್ನು ಉದ್ಘಾಟಿಸಲಿದ್ದಾರೆ. ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಉಪಸ್ಥಿತಿ ವಹಿಸಲಿದ್ದು, ಮೀನುಗಾರಿಕೆ ಇಲಾಖೆ ಸಚಿವ ಮಂಕಾಳ ಎಸ್.ವೈದ್ಯ ಅಧ್ಯಕ್ಷತೆ ವಹಿಸಲಿದ್ದಾರೆ. ಮತ್ಸ್ಯಮೇಳದಲ್ಲಿ 50ಕ್ಕಿಂತ ಹೆಚ್ಚಿನ ಮಳಿಗೆಗಳು ಮೀನುಗಾರಿಕೆ ವಿಷಯಕ್ಕೆ ಸಂಬಂಧಿಸಿದ್ದಾಗಿವೆ. 14ಕ್ಕೂ ಹೆಚ್ಚು ಮಳಿಗೆಗಳಲ್ಲಿ ರಾಜ್ಯ ಮೀನುಗಾರಿಕೆ ಇಲಾಖೆ ಹಾಗೂ ಕೇಂದ್ರ ಸರ್ಕಾರ ಸೇರಿದಂತೆ ಇತರೆ ಸಂಸ್ಥೆಗಳ ಕುರಿತಾದ್ದಾಗಿದೆ. ಇನ್ನು ಉಳಿದವುಗಳಲ್ಲಿ ವಿವಿಧ ಬಗೆಯ ಅಕ್ವೇರಿಯಂಗಳು ಮಾರಾಟಕ್ಕಿವೆ.



ಮಂಗಳೂರಿನ ಮೀನುಗಾರಿಕಾ ಮಹಾವಿದ್ಯಾಲಯ, ಹೆಬ್ಬಾಳದ ಮೀನುಗಾರಿಕಾ ಸಂಶೋಧನಾ ಮತ್ತು ಮಾಹಿತಿ ಕೇಂದ್ರ, ಕೇಂದ್ರ ಸರ್ಕಾರದ ಮೀನುಗಾರಿಕೆ ಸಂಬಂಧ ಯೋಜನೆಗಳನ್ನು ಒಳಗೊಂಡು ರಾಷ್ಟ್ರೀಯ ಮೀನುಗಾರಿಕಾ ಅಭಿವೃದ್ಧಿ ಮಂಡಳಿ ಹಾಗೂ ಇತರೆ ಮಳಿಗೆಗಳಲ್ಲಿನ ಮಾಹಿತಿಯನ್ [...] ಮಿಸಿದ್ದವರು ಕೇಳಿ ತಿಳಿದುಕೊ[...]

Hosadiganta pg 10

ವಿವಿಧ ಮಳಿಗೆಗಳಲ್ಲಿದ್ದ ಅಕ್ವೇರಿಯಂಗಳು ಮತ್ಸ್ಯಮೇಳದ ಪ್ರಮುಖ ಆಕರ್ಷಣೆಯಾಗಿದ್ದವು. ನಾನಾ ಬಗೆಯ ಅಕ್ವೇರಿಯಂಗಳಲ್ಲಿ ಇಡಲಾಗಿದ್ದ ಮೀನುಗಳು ಮೇಳಕ್ಕೆ ಬಂದವರನ್ನು ಆಸಕ್ತಿಯಿಂದ ವೀಕ್ಷಿಸುವಂತೆ ಮಾಡಿದ್ದವು. 150 ರೂ.ಗಳಿಂದ ಹಿಡಿದು 6.5 ಲಕ್ಷ ರೂ.ಗಳವರೆಗಿನ ಅಕ್ವೇರಿಯಂಗಳನ್ನು ಮಳಿಗೆಗಳಲ್ಲಿ ಪ್ರದರ್ಶನ ಜೊತೆಗೆ ಮಾರಾಟಕ್ಕೆ [...]ಗಿತ್ತು. ಮೊದಲ ದಿನ ವಿವಿಧ ಗೋಷ್ಠಿಗಳು [...]ವು.

**ರುಚಿರುಚಿ ಮೀನು ಖಾದ್ಯಗಳು** ಮೌಲ್ಯ ವರ್ಧಿತ ಮೀನು ಉತ್ಪನ್ನಗಳ ತಯಾರಿ, ಮಾರಾಟ, ರಫ್ತು ಮಾಡುವ ಉದ್ದೇಶದಿಂದ ಜನರಿಗೆ ಮೀನಿನ ವಿಶೇಷ ತಿಂಡಿಗಳನ್ನು ಈ ಸಲದ ಮತ್ಸ್ಯ ಮೇಳದಲ್ಲಿ ಪರಿಚಯಿಸಲಾಗಿದೆ. ಫಿಶ್ ಬಾಲ್ಸ್, ಫಿಶ್ ಬರ್ಗರ್, ಫಿಶ್ ಸ್ಯಾಂಡ್ ವಿಚ್ ಸೇರಿದಂತೆ ಕರಾವಳಿ ಭಾಗದ ವಿಶೇಷ ಮೀನಿನ ಉತ್ಪನ್ನಗಳನ್ನು ಹೆಚ್ಚಿನ ಪ್ರಚಾರದೊಂದಿಗೆ ಪರಿಚಯಿಸಲಾಗುತ್ತಿದೆ. ರಾಜ್ಯದಲ್ಲಿ ಮೊದಲು 1000 ಮಂದಿಗೆ 9 ಕೆ.ಜಿ ಮೀನು ಬೇಕಿತ್ತು. ಪ್ರಸ್ತುತ ಅದು 12 ಕೆಜಿಗೆ ಏರಿಕೆಯಾಗಿದೆ. ಇನ್ನು ಮುಂದಿನ ದಿನಗಳಲ್ಲಿ ವಿವಿಧ ಮೀನಿನ ಖಾದ್ಯಗಳನ್ನು ಮಾಡಲಾಗುತ್ತದೆ.

> ಮೌಲ್ಯವರ್ಧಿತ ಮೀನುಗಾರಿಕೆ, ಉತ್ಪಾದನೆ ಮತ್ತು ಮಾರಾಟ ಎಂಬ ಧ್ಯೇಯ ವಾಕ್ಯದೊಂದಿಗೆ ಈ ಸಲದ ಮತ್ಸ್ಯ ಮೇಳವನ್ನು ಆಯೋಜಿಸಲಾಗಿದೆ. ಕೇಂದ್ರ ಸರ್ಕಾರದ ಸಹಯೋಗದೊಂದಿಗೆ ರಾಜ್ಯ ಸರ್ಕಾರ ಮೀನುಗಾರಿಕೆಗೆ ಹೆಚ್ಚಿನ ಉತ್ತೇಜ ನೀಡುತ್ತಿದೆ.
>
> - ಯಶಸ್ವಿನಿ, ಸಹ ನಿರ್ದೇಶಕಿ । ಮಿನುಗಾರಿಕೆ ಇಲಾಖೆ

### 49,91,381 ಮೆಟ್ರಿಕ್ ಟನ್ ಮೀನು ಉತ್ಪಾದನೆ

ಮೀನು ಉತ್ಪಾದನೆಯಲ್ಲಿ ರಾಜ್ಯ ಐದು ವರ್ಷದಲ್ಲಿ 49,91,381 ಮೆಟ್ರಿಕ್ ಟನ್ ಮೀನು ಉತ್ಪಾದಿಸಿದ್ದು, ದೇಶದಲ್ಲಿ ಮೂರನೇ ಸ್ಥಾನವನ್ನು ಹೊಂದಿದೆ. ರಾಜ್ಯದಲ್ಲಿ 9.84 ಲಕ್ಷ ಮೀನುಗಾರರಾಗಿ ಗುರುತಿಸಿ ಕೊಂಡಿದ್ದು, ಅದರಲ್ಲಿ 3.01 ಲಕ್ಷ ಮಂದಿ ಪ್ರಸ್ತುತ ಮೀನುಗಾರಿಕೆಯಲ್ಲಿ ತೊಡಗಿಕೊಂಡಿದ್ದಾರೆ. ಮೀನು ಉತ್ಪಾದನೆಯಲ್ಲಿ ರಾಜ್ಯ ಕಳೆದ ಐದು ವರ್ಷದಲ್ಲಿ 56,182.26 ಕೋಟಿ ರೂ.ಗಳ ಮೌಲ್ಯದ 49,91,381 ಮೆಟ್ರಿಕ್ ಟನ್ ಮೀನನ್ನು ಉತ್ಪಾದಿಸಿದೆ. ಮೀನಿನ ಮೌಲ್ಯವರ್ಧಿತ ಉತ್ಪಾದನೆ ಮತ್ತು ಮಾರಾಟಕ್ಕೆ ಒತ್ತು ನೀಡಲಾಗುತ್ತಿದ್ದು, ಇನ್ನೂ ಹೆಚ್ಚಿನ ಮೀನು ಉತ್ಪಾದನೆಗೆ ಯೋಜನೆ ರೂಪಿಸಲಾಗುತ್ತಿದೆ.

S-karnataka pg 05

# ಮೆಕ್ಕೆಜೋಳ ಬೆಳೆಗಾರರಿಗೆ ನೆರವಿನ ಭರವಸೆ

- **ವಿಕ ಸುದ್ದಿಲೋಕ** ಬೆಂಗಳೂರು

ಮೆಕ್ಕೆ ಜೋಳ ಬೆಲೆ ಕುಸಿತದಿಂದ ಸಂಕಷ್ಟಕ್ಕೆ ಒಳಗಾಗಿರುವ ರೈತರಿಗೆ ಸರಕಾರ ಎಲ್ಲ ಅಗತ್ಯ ನೆರವು ನೀಡಲಿದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಭರವಸೆ ನೀಡಿದ್ದಾರೆ.



ಉತ್ತರ ಕರ್ನಾಟಕ ಭಾಗದಲ್ಲಿ ಮೆಕ್ಕೆಜೋಳ ಬೆಳೆದ ರೈತರ ಪ್ರತಿಭಟನೆ ಹಿನ್ನೆಲೆಯಲ್ಲಿ ಸಿಎಂ ಅವರ 'ಕಾವೇರಿ' ನಿವಾಸದಲ್ಲಿ ಶುಕ್ರವಾರ ಸಭೆ ನಡೆಯಿತು.

ಕೇಂದ್ರ ಸರಕಾರ 70 ಲಕ್ಷ ಮೆಟ್ರಿಕ್ ಟನ್ ಮೆಕ್ಕೆಜೋಳ ಆಮದು ಮಾಡಿಕೊಂಡಿರುವುದೇ ಸಮಸ್ಯೆಗೆ ಕಾರಣವಾಗಿದ್ದು, ಆಮದು ನಿರ್ಬಂಧಿಸಲು ಒತ್ತಾಯಿಸಿ ಕೇಂದ್ರಕ್ಕೆ ಪತ್ರ ಬರೆಯುವುದಾಗಿ ಹೇಳಿದ್ದಾರೆ.

"ಈ ಬಾರಿ ಮೆಕ್ಕೆಜೋಳ ಉತ್ಪಾದನೆ ಹೆಚ್ಚಳವಾಗಿರುವುದು ಬೆಲೆ ಕುಸಿತಕ್ಕೆ ಕಾರಣವಾಗಿದೆ. ಈ ಬಗ್ಗೆ ಅರಿವಿದ್ದರೂ ಮೆಕ್ಕೆ ಜೋಳ ಆಮದು ಮಾಡಿಕೊಂಡಿದೆ. ಜತೆಗೆ, ಮೆಕ್ಕೆಜೋಳದಿಂದ ಎಥೆನಾಲ್ ಉತ್ಪಾದಿಸಲು ಕೇಂದ್ರ ಸರಕಾರ ರಾಜ್ಯಕ್ಕೆ ನಿಗದಿ ಪಡಿಸಿರುವ ಕೋಟಾ ಪ್ರಮಾಣವೂ ತೀರಾ ಕಡಿಮೆ ಇದ್ದು, ಡಿಸ್ಟಿಲರಿಗಳು ಕಡಿಮೆ ಪ್ರಮಾಣದಲ್ಲಿ ಮೆಕ್ಕೆ ಜೋಳ ಖರೀದಿಸುತ್ತಿವೆ," ಎಂದು ಮುಖ್ಯಮಂತ್ರಿಗಳು ಕೇಂದ್ರ ಸರಕಾರದ ವಿರುದ್ಧ ಹರಿಹಾಯ್ದರು.

"ಬೆಂಬಲ ಬೆಲೆ ಯೋಜನೆಯಡಿ ಮೆಕ್ಕೆ ಜೋಳ ಸಂಗ್ರಹಣೆ ಮತ್ತು ಎಥೆನಾಲ್ ಉತ್ಪಾದನೆಗೆ ಬಳಕೆಗಾಗಿ ಕೇಂದ್ರ ಸರಕಾರ ಮಾರ್ಗಸೂಚಿ ಬಿಡುಗಡೆ ಮಾಡಿದ್ದರೂ, ಸಂಬಂಧಪಟ್ಟ ನೋಡಲ್ ಏಜೆನ್ಸಿಗಳಾದ ನಾಫೆಡ್ ಮತ್ತು ಎನ್‌ಸಿಸಿಎಫ್ ಮಾರ್ಗ ಸೂಚಿಯಂತೆ ಇನ್ನೂ ಖರೀದಿ ಪ್ರಕ್ರಿಯೆ ಆರಂಭಿಸಿಲ್ಲ, ಇದು ಸಮಸ್ಯೆಗೆ ಮೂಲ ಕಾರಣವಾಗಿದೆ," ಎಂದರು.

**ತೀರ್ಮಾನ ಏನು?:** ಮೆಕ್ಕೆಜೋಳ ಆಮದು ನಿರ್ಬಂಧಿಸಿದರೆ ಬೆಲೆಯಲ್ಲಿ ಸ್ಥಿರತೆ ಸಾಧಿಸಲು ಸಾಧ್ಯವಿದ್ದು, ಈ ಬಗ್ಗೆ ಕೇಂದ್ರ ಸರಕಾರವನ್ನು ಒತ್ತಾಯಿಸುವುದು. ಸದ್ಯಕ್ಕೆ ರಾಜ್ಯದಲ್ಲಿ 8 ಲಕ್ಷ ಟನ್ ಮೆಕ್ಕೆ ಜೋಳವನ್ನು ನಾಫೆಡ್ ಮತ್ತಿತರ ಏಜೆನ್ಸಿಗಳ ಮೂಲಕ ಖರೀದಿಸಲು ಸೂಚಿಸುವಂತೆ ಕೇಂದ್ರದ ಮೇಲೆ ಒತ್ತಡ ತರಬೇಕು. ಡಿಸ್ಟಿಲರಿಗಳು ಬೆಲೆ ಕಡಿಮೆ ಇದ್ದಾಗಲೇ ಮೆಕ್ಕೆಜೋಳ ಖರೀದಿಸಿ ಶೇಖರಣೆ ಮಾಡಿಕೊಂಡಿದ್ದು, ಈಗ ಖರೀದಿಗೆ ಮುಂದೆ ಬರುತ್ತಿಲ್ಲ, ಇದು ನಿಯಮಗಳ ಉಲ್ಲಂಘನೆಯಾಗಿದೆ. ಹಾಗಾಗಿ, ಎಥೆನಾಲ್ ಉತ್ಪಾದನೆಗೆ ತಕ್ಷಣ ಮೆಕ್ಕೆಜೋಳ ಖರೀದಿಸುವಂತೆ ರಾಜ್ಯದ ಪ್ರಮುಖ ಡಿಸ್ಟಿಲರಿಗಳೊಂದಿಗೆ ಸಭೆ ನಡೆಸಿ ಸೂಚನೆ ನೀಡಲು ಸಭೆಯಲ್ಲಿ ನಿರ್ಣಯಿಸಲಾಯಿತು.

### ಆನ್‌ಲೈನ್‌ನಲ್ಲಿ ಕೃಷಿ ಸಚಿವ

ಕೃಷಿ ಸಚಿವ ಚಲುವರಾಯಸ್ವಾಮಿ ಅವರು ದಿಲ್ಲಿ ಪ್ರವಾಸದಲ್ಲಿದ್ದ ಕಾರಣ ದಿಢೀರ್ ಆಯೋಜನೆಯಾದ ಸಭೆಗೆ ಆನ್‌ಲೈನ್ ಮೂಲಕ ಪಾಲ್ಗೊಂಡರು. "ಗುರುವಾರ ರಾತ್ರಿಯೇ ಕೇಂದ್ರ ಕೃಷಿ ಸಚಿವರನ್ನು ಭೇಟಿ ಮಾಡಿ ಮೆಕ್ಕೆ ಜೋಳ ಬೆಳೆದ ರೈತರು ಎದುರಿಸುತ್ತಿರುವ ಸಮಸ್ಯೆ ಬಗ್ಗೆ ವಿವರಿಸಿ, ಅಗತ್ಯ ನೆರವು ಕೇಳಲಾಗಿದೆ," ಎಂದು ಸಭೆಯ ಗಮನಕ್ಕೆ ತಂದರು.

V-karnataka pg 09

# 35 ಕೋಟಿ ಟನ್ ಧಾನ್ಯ ಉತ್ಪಾದನೆ

## ಸರ್ಕಾರದ ವಿವಿಧ ಯೋಜನೆಗಳಿಂದ ಆಹಾರ ಧಾನ್ಯ ಉತ್ಪಾದನೆಯಲ್ಲಿ ಹೆಚ್ಚಳ

ನವದೆಹಲಿ (ಪಿಟಿಐ): ಜೂನ್ ಅಂತ್ಯಕ್ಕೆ ಕೊನೆಗೊಂಡ 2024-25ನೇ ಸಾಲಿನ ಬೆಳೆ ವರ್ಷದಲ್ಲಿ ದೇಶದಲ್ಲಿ 35.77 ಕೋಟಿ ಟನ್‌ನಷ್ಟು ಆಹಾರ ಧಾನ್ಯಗಳ ಉತ್ಪಾದನೆ ಆಗಿದೆ ಎಂದು ಕೇಂದ್ರ ಸರ್ಕಾರ ತಿಳಿಸಿದೆ.

2023-24ನೇ ಸಾಲಿನ ಬೆಳೆ ವರ್ಷದಲ್ಲಿ (ಜುಲೈನಿಂದ ಜೂನ್) 33.22 ಕೋಟಿ ಟನ್‌ನಷ್ಟು ಧಾನ್ಯ ಉತ್ಪಾದನೆ ಆಗಿತ್ತು. ಇದಕ್ಕೆ ಹೋಲಿಸಿದರೆ ಉತ್ಪಾದನೆಯಲ್ಲಿ ಶೇ 8ರಷ್ಟು ಏರಿಕೆ ಆಗಿದೆ ಎಂದು ತಿಳಿಸಿದೆ.

'ಹೆಚ್ಚಿನ ಕನಿಷ್ಠ ಬೆಂಬಲ ಬೆಲೆ (ಎಂಎಸ್‌ಪಿ), ಸರ್ಕಾರದಿಂದಲೇ ಖರೀದಿ ಸೇರಿದಂತೆ ರೈತರ ಪರಿಶ್ರಮ



ಹಾಗೂ ಸರ್ಕಾರದ ಯೋಜನೆಗಳಿಂದ ಈ ಬಾರಿ ದಾಖಲೆಯ ಪ್ರಮಾಣದಲ್ಲಿ ಆಹಾರ ಧಾನ್ಯಗಳ ಉತ್ಪಾದನೆ ಆಗಿದೆ' ಎಂದು ಕೇಂದ್ರ ಕೃಷಿ ಸಚಿವ ಶಿವರಾಜ್ ಸಿಂಗ್ ಚೌಹಾಣ್ ಹೇಳಿದ್ದಾರೆ.

2023-24ನೇ ಬೆಳೆ ವರ್ಷದಲ್ಲಿ 11.32 ಕೋಟಿ ಟನ್‌ನಷ್ಟು ಗೋಧಿ ಉತ್ಪಾದನೆ ಆಗಿತ್ತು. ಈ ಬಾರಿ 11.79

**2015-16ರಿಂದ 2024-25ರ ಅವಧಿಯಲ್ಲಿ ದೇಶದ ಆಹಾರ ಧಾನ್ಯ ಉತ್ಪಾದನೆಯು 25.15 ಕೋಟಿ ಟನ್‌ನಿಂದ 35.77 ಕೋಟಿ ಟನ್‌ಗೆ ಹೆಚ್ಚಳವಾಗಿದೆ**
**ಶಿವರಾಜ್ ಸಿಂಗ್ ಚೌಹಾಣ್,**
ಕೇಂದ್ರ ಕೃಷಿ ಸಚಿವ

ಕೋಟಿ ಟನ್‌ನಷ್ಟು ಉತ್ಪಾದನೆ ಆಗಿದ್ದು, ಉತ್ಪಾದನೆಯಲ್ಲಿ ಏರಿಕೆ ಕಂಡಿದೆ.

ಭತ್ತ ಉತ್ಪಾದನೆಯು 15 ಕೋಟಿ ಟನ್‌ನಷ್ಟಾಗಿದೆ. ಏಕದಳ ಧಾನ್ಯಗಳ ಉತ್ಪಾದನೆ 6.39 ಕೋಟಿ ಮತ್ತು ದ್ವಿದಳ ಧಾನ್ಯಗಳ ಉತ್ಪಾದನೆ 2.56 ಕೋಟಿ ಟನ್‌ಗೆ ಹೆಚ್ಚಳವಾಗಿದೆ. 2023-24ರ ಬೆಳೆ ವರ್ಷದಲ್ಲಿ ಇದು ಕ್ರಮವಾಗಿ, 13.78 ಕೋಟಿ ಟನ್, 5.69 ಕೋಟಿ ಟನ್ ಮತ್ತು 2.42 ಕೋಟಿ ಟನ್‌ನಷ್ಟಾಗಿತ್ತು ಎಂದು ತಿಳಿಸಿದೆ.

ಎಣ್ಣೆ ಕಾಳುಗಳ ಉತ್ಪಾದನೆ 3.96 ಕೋಟಿ ಟನ್‌ನಿಂದ 4.29 ಕೋಟಿ ಟನ್‌ಗೆ ಹೆಚ್ಚಳವಾಗಿದೆ. ವಾಣಿಜ್ಯ ಬೆಳೆಗಳಲ್ಲಿ ಕಬ್ಬು 45.46 ಕೋಟಿ ಟನ್‌ನಷ್ಟು ಉತ್ಪಾದನೆ ಆಗಿದೆ.

ಆದರೆ, ಹತ್ತಿ ಉತ್ಪಾದನೆ 3.25 ಕೋಟಿ ಬೇಲ್‌ನಿಂದ 2.97 ಕೋಟಿ ಬೇಲ್‌ಗೆ (1 ಬೇಲ್ ಎಂದರೆ 170 ಕೆ.ಜಿ) ಇಳಿದಿದೆ ಎಂದು ತಿಳಿಸಿದೆ.

Prajavani pg 07

V-karnataka pg 05

# ಬರಲಿದೆ ಕರುನಾಡ ತಾಜಾ ಮೀನು!

## ವ್ಯಾಕ್ಯೂಮ್ ಪ್ಯಾಕ್‌ನಲ್ಲಿ ಅಡುಗೆಗೆ ಬರಲಿದೆ ಸಂಸ್ಕರಿತ ಮೀನು

■ ಎಚ್.ಪಿ. ಪುಣ್ಯವತಿ ಬೆಂಗಳೂರು
punyavathi.hp@timesofindia.com

ನಂದಿನಿ ಹಾಲು ಮತ್ತಿತರ ಉತ್ಪನ್ನಗಳಂತೆ ಕರ್ನಾಟಕದ ಮೀನಿಗೂ ಮುದ್ರಿತ ಚಿಹ್ನೆಯೊಂದಿಗೆ ಬರಲಿದೆ ಬ್ರ್ಯಾಂಡ್ ನೇಮ್!

ಕರುನಾಡಿನ ಪ್ರತಿಷ್ಠಿತ ಹಾಲಿನ ಬ್ರ್ಯಾಂಡ್ 'ನಂದಿನಿ'ಗೆ ರಾಜ್ಯ ಸೇರಿದಂತೆ ದೇಶದೆಲ್ಲೆಡೆ ಬೇಡಿಕೆ ಹೆಚ್ಚಿದೆ. ನಂದಿನಿ ಹಾಲು ಮತ್ತು ಹಾಲಿನ ಉತ್ಪನ್ನಗಳು ಮನೆ ಮಾತಾಗಿವೆ. ಇಂಥದೇ ಮಾದರಿಯಲ್ಲಿ 'ರೆಡಿ ಟು ಕುಕ್' ಸಂಸ್ಕರಿಸಿದ ತಾಜಾ ಮೀನನ್ನು ವ್ಯಾಕ್ಯೂಮ್ ಪ್ಯಾಕ್‌ಗಳಲ್ಲಿ ವಿತರಿಸಲು ಕರ್ನಾಟಕ ಮೀನುಗಾರಿಕಾ ಅಭಿವೃದ್ಧಿ ನಿಗಮ ಚಿಂತನೆ ನಡೆಸಿದೆ. ಜನವರಿ-ಫೆಬ್ರವರಿ ವೇಳೆಗೆ ಪ್ರಾಯೋಗಿಕವಾಗಿ ಇದಕ್ಕೆ ಚಾಲನೆ ನೀಡಲಿದೆ. ನಂತರ ಗ್ರಾಹಕರ ಬೇಡಿಕೆ ಆಧರಿಸಿ ವಿಸ್ತರಿಸಲು ನಿರ್ಧರಿಸಿದೆ.

ಬೆಂಗಳೂರಿನಲ್ಲಿ 28 ಏಜೆನ್ಸಿಗಳಿವೆ. ಕೆಲವೆಡೆ ಕಡಿಮೆ ದರಕ್ಕೆ ಗುಣಮಟ್ಟವಲ್ಲದ ಮೀನುಗಳನ್ನು ಖರೀದಿಸಿ ತಂದು ನಿಗಮದ ಮೀನೆಂದು ಮಾರಾಟ ಮಾಡಿದ ಆರೋಪಗಳು ಕೇಳಿ ಬಂದಿದ್ದವು. ಜತೆಗೆ, ಜನರಿಗೂ ಕೂಡ ತಾಜಾ ಮೀನನ್ನು ಯಥಾವತ್ ನೀಡಿದರೆ ಅದನ್ನು ಸ್ವಚ್ಛಗೊಳಿಸಿ ಬಳಸುವುದು ಕಷ್ಟ. ಹೀಗಾಗಿ, ಸ್ವಚ್ಛಗೊಳಿಸಿ, ಸಂಸ್ಕರಣೆ ಮಾಡಿ ವ್ಯಾಕ್ಯೂಮ್ ಪ್ಯಾಕ್ ಮಾಡಿದ ತಾಜಾ ಮೀನನ್ನು ಗುಣಮಟ್ಟದ ಭರವಸೆಯೊಂದಿಗೆ ತನ್ನದೇ ಬ್ರ್ಯಾಂಡ್‌ನಡಿ ಮಾರಾಟ ಮಾಡಲು ನಿಗಮ ಉದ್ದೇಶಿಸಿದೆ. ಇದರಿಂದ ಸಾರ್ವಜನಿಕರಲ್ಲಿ ವಿಶ್ವಾಸಾರ್ಹತೆಯೂ ಹೆಚ್ಚುತ್ತದೆ. ಗುಣಮಟ್ಟದ ಮೀನಿಗೆ ಒಂದು ಉತ್ತಮ ಬ್ರ್ಯಾಂಡ್ ಕೂಡ ದೊರೆಯುತ್ತದೆ. ಮೀನು ಕೃಷಿಕರಿಗೂ ಇದು ನೆರವಾಗಲಿದೆ ಎಂಬುದು ನಿಗಮದ ಅಧಿಕಾರಿಗಳ ಪ್ರತಿಕ್ರಿಯೆ.

''ಹಸಿ ಮೀನಿನ ಮೇಲೆ ನಾವು ಮುದ್ರಿತ ಚಿಹ್ನೆ ಬಳಸಲು ಸಾಧ್ಯವಿಲ್ಲ. ಹೀಗಾಗಿ, ಪ್ಯಾಕ್ ಮೇಲೆ ಗುಣಮಟ್ಟ ಕಾಯ್ದುಕೊಂಡಿರುವ ಚಿಹ್ನೆ ಮುದ್ರಿಸಿ ಮಾರಾಟ ಮಾಡಲು ನಿರ್ಧರಿಸಲಾಗಿದೆ,'' ಎಂದು ಕರ್ನಾಟಕ ಮೀನುಗಾರಿಕಾ ಅಭಿವೃದ್ಧಿ ನಿಗಮದ ಪ್ರಧಾನ ವ್ಯವಸ್ಥಾಪಕ ಯು. ಮಹೇಶ್ ಕುಮಾರ್ 'ವಿಕ'ಗೆ ತಿಳಿಸಿದರು.



**ಮೀನಿಗೆ ಬ್ರ್ಯಾಂಡ್ ತಂದುಕೊಡುವಲ್ಲಿ ಆರಂಭದಲ್ಲಿಯೇ ಯಂತ್ರೋಪಕರಣಗಳಿಗೆ ಹಣ ಹೂಡಿಕೆ ಮಾಡುವುದಿಲ್ಲ. ಬದಲಿಗೆ ಬೆಂಗಳೂರಿನಲ್ಲಿ ಸಾಕಷ್ಟು ವ್ಯಾಕ್ಯೂಮ್ ಪ್ಯಾಕಿಂಗ್ ಸೆಂಟರ್‌ಗಳಿವೆ. ಹೀಗಾಗಿ, ಹೊರಗುತ್ತಿಗೆ ಆಧಾರದಲ್ಲಿ ನಾವು ಯೋಜನೆ ಆರಂಭಿಸುತ್ತೇವೆ.**
**-ಯು. ಮಹೇಶ್ ಕುಮಾರ್**
ಪ್ರಧಾನ ವ್ಯವಸ್ಥಾಪಕರು, ಕರ್ನಾಟಕ ಮೀನುಗಾರಿಕಾ ಅಭಿವೃದ್ಧಿ ನಿಗಮ

**ನಿಗಮದ ಮಳಿಗೆಗಳಲ್ಲಿ ಮಾರಾಟ:** ''ಮಲ್ಪೆ ಮತ್ತಿತರ ಭಾಗಗಳಿಂದ ನೇರವಾಗಿ ಮೀನನ್ನು ಬೆಂಗಳೂರಿಗೆ ತರಿಸಿ, ಸ್ವಚ್ಛ ಮತ್ತು ಶೂನ್ಯ ಡಿಗ್ರಿ ಉಷ್ಣಾಂಶದಲ್ಲಿಟ್ಟು ವ್ಯಾಕ್ಯೂಮ್ ಪ್ಯಾಕ್ ಮಾಡಿ ಆಗಿಂದಾಗಲೇ ಗ್ರಾಹಕರಿಗೆ ವಿತರಿಸಲಾಗುವುದು. ಅರ್ಧ ಕೆ.ಜಿ., ಒಂದು ಕೆ.ಜಿ. ತೂಕದ ಪ್ಯಾಕೆಟ್‌ಗಳು ಲಭ್ಯವಿರಲಿವೆ. ಭಾರತೀಯ ಆಹಾರ ಸುರಕ್ಷೆ ಮತ್ತು ಗುಣಮಟ್ಟ ಪ್ರಾಧಿಕಾರ (ಎಫ್‌ಎಸ್‌ಎಸ್‌ಎಐ) ದಿಂದ ಅನುಮೋದನೆಗೊಂಡ ಲೇಬಲ್ ಕೂಡ ಇರುತ್ತದೆ. ಗ್ರಾಹಕರಿಗೆ ಸಂಶಯ ಬಂದರೆ ದೂರು ಸಲ್ಲಿಸಬಹುದು. ನಮ್ಮಲ್ಲಿ 28 ಏಜೆನ್ಸಿಗಳಿದ್ದು, ಎಲ್ಲೆಡೆ ಮಳಿಗೆಗಳಿವೆ. ಈ ಮಳಿಗೆಗಳಲ್ಲೇ ಮಾರಾಟ ಮಾಡಲಾಗುವುದು,'' ಎಂದು ವಿವರಿಸಿದರು.

**ರಾಜ್ಯಾದ್ಯಂತ ಮತ್ಸ್ಯದರ್ಶಿನಿಗಳು**

ಬಜೆಟ್‌ನಲ್ಲಿ ಘೋಷಣೆ ಮಾಡಿದಂತೆ 'ಮತ್ಸ್ಯದರ್ಶಿನಿ' ಮೀನೂಟದ ಹೋಟೆಲ್ ಅನ್ನು ಮೈಸೂರಿನಲ್ಲಿ ಸುಸಜ್ಜಿತ ಮಾದರಿಯಲ್ಲಿ ಶೀಘ್ರದಲ್ಲಿಯೇ ತೆರೆಯಲಾಗುವುದು. ರಾಜ್ಯಾದ್ಯಂತ ಎಲ್ಲಾ ಜಿಲ್ಲೆಗಳಲ್ಲಿ ಮತ್ಸ್ಯದರ್ಶಿನಿಗಳನ್ನು ತೆರೆಯಲು ನಿರ್ಧರಿಸಲಾಗಿದೆ. ಗ್ರಾಹಕರಿಗೆ ನ್ಯಾಯೋಚಿತ ದರದಲ್ಲಿ ಆರೋಗ್ಯಕರ ಮೀನೂಟ ನೀಡಬೇಕು ಎಂಬುದು ಯೋಜನೆಯ ಉದ್ದೇಶ. ಕೋಲಾರ, ತುಮಕೂರು, ಬೆಂಗಳೂರು, ಮಂಗಳೂರಿನಲ್ಲಿ ಮತ್ಸ್ಯದರ್ಶಿನಿಗಳಿವೆ. ಇದೀಗ ಮೈಸೂರಿನಲ್ಲಿ ಆರಂಭಿಸಲು ಸಿದ್ಧತೆಗಳು ನಡೆದಿವೆ ಎಂದು ತಿಳಿಸಿದರು.

# ಮತ್ಸ್ಯಮೇಳದಲ್ಲಿ ಮೀನಿನ ವೆರೈಟಿ

## ಮೀನಿನ ಚಕ್ಕುಲಿ, ಹಪ್ಪಳ, ಉಪ್ಪಿನಕಾಯಿ, ಫಿಶ್ ಬಾಲ್‌ಗಳ ಆಕರ್ಷಣೆ

■ ವಿಕ ಸುದ್ದಿಲೋಕ ಬೆಂಗಳೂರು

ಮೀನಿನ ಚಕ್ಕುಲಿ, ಮೀನಿನ ಉಪ್ಪಿನಕಾಯಿ, ಚಟ್ನಿ ಪುಡಿ, ಮೀನಿನ ಹಪ್ಪಳ.. ಹೀಗೆ ಬಗೆ ಬಗೆಯ ಮೌಲ್ಯವರ್ಧಿತ ಉತ್ಪನ್ನಗಳು ಒಂದೆಡೆಯಾದರೆ, ಬಾಯಲ್ಲಿ ನೀರೂರಿಸುವ ಫಿಶ್ ಬಾಲ್ಸ್, ಫಿಶ್ ಬರ್ಗರ್, ಫಿಶ್ ಸ್ಯಾಂಡ್ ವಿಚ್, ಫ್ರೈ, ಕಬಾಬ್, ಸಿಗಡಿ, ಏಡಿಯ ತಿಂಡಿಗಳು ಇನ್ನೊಂದೆಡೆ... ಮತ್ತೊಂದೆಡೆ ಬಗೆ ಬಗೆಯ ಅಲಂಕಾರಿಕ ಮೀನುಗಳು, ಅಕ್ವೇರಿಯಂಗಳ ಮನಮೋಹಕ ನೋಟ...

ವಿಶ್ವ ಮೀನುಗಾರಿಕೆ ದಿನದ ಅಂಗವಾಗಿ ಹೆಬ್ಬಾಳದ ಪಶುವೈದ್ಯಕೀಯ ಮಹಾವಿದ್ಯಾಲಯದ ಆವರಣದಲ್ಲಿ ಮೂರು ದಿನಗಳ ಕಾಲ ಆಯೋಜನೆಗೊಂಡಿರುವ ವಿಶ್ವ ಮೀನುಗಾರಿಕೆ ದಿನಾಚರಣೆ ಹಾಗೂ ಮತ್ಸ್ಯಮೇಳ -2025ಕ್ಕೆ ಶುಕ್ರವಾರ ಚಾಲನೆ ದೊರೆಯಿತು. ಈ ಮೇಳದಲ್ಲಿ ಮೀನಿನ ಪ್ರಪಂಚವೇ ಅನಾವರಣಗೊಂಡಿದೆ.

ಮೀನು ಕೃಷಿ ಕುರಿತು ಉತ್ತೇಜನ ನೀಡುವ 50ಕ್ಕೂ ಹೆಚ್ಚು ಮಳಿಗೆಗಳನ್ನು ಮೇಳದಲ್ಲಿ ತೆರೆಯಲಾಗಿದೆ. ಜತೆಗೆ, ಬಗೆ ಬಗೆಯ ಮೀನಿನ ಖಾದ್ಯಗಳ ಮಾರಾಟ ಮಳಿಗೆಗಳೂ ಗ್ರಾಹಕರನ್ನು ಸೆಳೆಯುತ್ತಿವೆ. ಮೊದಲ ದಿನ ಮೀನು ಕೃಷಿ ಕುರಿತು ನಾನಾ ತಜ್ಞರು ಹಲವು ತಾಂತ್ರಿಕ ಗೋಷ್ಠಿಗಳನ್ನು ನಡೆಸಿಕೊಟ್ಟರು.

ಮಂಗಳೂರಿನ ಮೀನುಗಾರಿಕೆ ಮಹಾವಿದ್ಯಾಲಯದ ಮಳಿಗೆ ಸೇರಿದಂತೆ ರಾಜ್ಯ ವಿವಿಧ ಭಾಗಗಳ ಮಳಿಗೆಗಳೂ ಮೇಳದಲ್ಲಿವೆ. ಜತೆಗೆ, ಕಪ್ಪೆ ಚಿಪ್ಪಿನಿಂದ ಸಂಸ್ಕರಿಸಿ ತೆಗೆದಿರುವ ಮುತ್ತಿನ ಹಾರ, ಕಿವಿಯೋಲೆಗಳ ಪ್ರದರ್ಶನ ಕೂಡ ವಿಶೇಷವಾಗಿದ್ದವು. 100 ರೂ.ನಿಂದ ಆರೂವರೆ ಲಕ್ಷ ರೂ.ವರೆಗಿನ ಅಕ್ವೇರಿಯಂಗಳು, ಮೀನು ಹಿಡಿಯುವ ಸಾಮಗ್ರಿಗಳು ಗ್ರಾಹಕರನ್ನು ಆಕರ್ಷಿಸುತ್ತಿವೆ.



**ಅಧಿಕಾರಿಗಳಿಂದ ತಾಂತ್ರಿಕ ಗೋಷ್ಠಿ:** 'ಮೌಲ್ಯವರ್ಧಿತ ಮೀನುಗಾರಿಕೆ, ಉತ್ಪಾದನೆ ಮತ್ತು ಮಾರಾಟ' ಎಂಬ ಧ್ಯೇಯ ವಾಕ್ಯದೊಂದಿಗೆ ಈ ಬಾರಿಯ ಮತ್ಸ್ಯ ಮೇಳವನ್ನು ಆಯೋಜಿಸಲಾಗಿದೆ. ಕೇಂದ್ರದ ಸಹಯೋಗದೊಂದಿಗೆ ರಾಜ್ಯ ಸರಕಾರ ಮೀನುಗಾರಿಕೆಗೆ ಹೆಚ್ಚಿನ ಉತ್ತೇಜನ ನೀಡುತ್ತಿದೆ ಎಂದು ರಾಜ್ಯ ಮಿನುಗಾರಿಕೆ ಇಲಾಖೆಯ (ಬೆಂಗಳೂರು ವಿಭಾಗ) ಜಂಟಿ ನಿರ್ದೇಶಕಿ ಟಿ.ಎಸ್. ಯಶಸ್ವಿನಿ ತಿಳಿಸಿದರು.

''ಕರ್ನಾಟಕ ಐದು ವರ್ಷಗಳಲ್ಲಿ 49,91,381 ಮೆಟ್ರಿಕ್ ಟನ್ ಮೀನು ಉತ್ಪಾದಿಸಿದ್ದು, ದೇಶದಲ್ಲಿ ಮೂರನೇ ಸ್ಥಾನ ಹೊಂದಿದೆ. ಕರಾವಳಿ ಮತ್ತು ಒಳನಾಡು ಭಾಗ ಸೇರಿದಂತೆ ರಾಜ್ಯದಲ್ಲಿ ಒಟ್ಟಾರೆ 9.84 ಲಕ್ಷ ಮಂದಿ ಮೀನುಗಾರರಾಗಿ ಗುರುತಿಸಿಕೊಂಡಿದ್ದು, ಅದರಲ್ಲಿ 3.01 ಲಕ್ಷ ಮಂದಿ ಸಕ್ರಿಯ ಮೀನುಗಾರರಾಗಿ ಕೆಲಸ ಮಾಡುತ್ತಿದ್ದಾರೆ,'' ಎಂದು ಮೀನುಗಾರಿಕೆ ಇಲಾಖೆ ಹಿರಿಯ ಅಧಿಕಾರಿಯೊಬ್ಬರು ತಾಂತ್ರಿಕ ಗೋಷ್ಠಿಯಲ್ಲಿ ಮಾಹಿತಿ ನೀಡಿದರು.

''ಮೀನು ಉತ್ಪಾದನೆಯಲ್ಲಿ ಆಂಧ್ರಪ್ರದೇಶ ಮೊದಲ ಸ್ಥಾನದಲ್ಲಿದ್ದರೆ, ಪಶ್ಚಿಮ ಬಂಗಾಳ ಎರಡನೇ ಸ್ಥಾನದಲ್ಲಿದೆ. ಕರ್ನಾಟಕ ಮೂರನೇ ಸ್ಥಾನದಲ್ಲಿದೆ. ಕಳೆದ ಐದು ವರ್ಷಗಳಲ್ಲಿ 56,182.26 ಕೋಟಿ ರೂ. ಮೌಲ್ಯದ 49,91,381 ಮೆಟ್ರಿಕ್ ಟನ್ ಮೀನನ್ನು ಉತ್ಪಾದಿಸಿದೆ. ಮೀನಿನ ಮೌಲ್ಯವರ್ಧಿತ ಉತ್ಪಾದನೆ ಮತ್ತು ಮಾರಾಟಕ್ಕೆ ಒತ್ತು ನೀಡಲಾಗುತ್ತಿದ್ದು, ಇನ್ನೂ ಹೆಚ್ಚಿನ ಮೀನು ಉತ್ಪಾದನೆಗೆ ಯೋಜನೆ ರೂಪಿಸಲಾಗುತ್ತಿದೆ,'' ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ಮೀನುಗಾರಿಕೆ ಇಲಾಖೆ ನಿರ್ದೇಶಕ ದಿನೇಶ್ ಕುಮಾರ್ ಕಳ್ಳೇರ್ ಉಪಸ್ಥಿತರಿದ್ದರು.

**ಫುಡ್‌ಕೋರ್ಟ್‌ನಲ್ಲಿ ಬಗೆಬಗೆ ಖಾದ್ಯಗಳು**

ಫುಡ್‌ಕೋರ್ಟ್‌ನಲ್ಲಿ ಕರ್ನಾಟಕ ಮೀನುಗಾರಿಕಾ ಅಭಿವೃದ್ಧಿ ನಿಗಮದ ಮಳಿಗೆ ಸೇರಿದಂತೆ ನಾನಾ ಖಾದ್ಯ ಮಳಿಗೆಗಳನ್ನು ತೆರೆಯಲಾಗಿದ್ದು, ಬಗೆ ಬಗೆಯ ಖಾದ್ಯಗಳು ಮಾರಾಟವಾಗುತ್ತಿವೆ.

**ಅಲಂಕಾರಿಕ ಮೀನುಗಳ ಸುರಂಗ**

ಪ್ರವೇಶ ದ್ವಾರವನ್ನು ಅಕ್ವೇರಿಯಂ ಮಾದರಿಯಲ್ಲಿ ನಿರ್ಮಿಸಲಾಗಿದ್ದು, ಬಗೆ ಬಗೆಯ ಅಲಂಕಾರಿಕ ಮೀನುಗಳು ಗ್ರಾಹಕರನ್ನು ಸ್ವಾಗತಿಸುತ್ತವೆ. ಒಳ ಹೋದರೆ ಅಲ್ಲಿಯೂ ಮೀನುಗಳ ಚಮತ್ಕಾರ ಗಮನ ಸೆಳೆಯುತ್ತದೆ.

**ಇಂದು ಸಿಎಂ ಭಾಗಿ ಸಾಧ್ಯತೆ**

ಮತ್ಸ್ಯಮೇಳದಲ್ಲಿ ಶನಿವಾರ (ನ.22) ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತು ಡಿಸಿಎಂ ಡಿ.ಕೆ. ಶಿವಕುಮಾರ್ ಭಾಗವಹಿಸುವ ಸಾಧ್ಯತೆಯಿದ್ದು, ಮೀನುಗಾರರ ಸಮಾವೇಶ ಮತ್ತು ವಿವಿಧ ಪ್ರಶಸ್ತಿಗಳ ಪ್ರದಾನ ಸಮಾರಂಭ ನಡೆಯಲಿದೆ. ಸಾರ್ವಜನಿಕರಿಗೆ ಉಚಿತ ಪ್ರವೇಶ ಕಲ್ಪಿಸಲಾಗಿದೆ.